ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/38/2016-17. ದಿನಾಂಕ:23-08-2016.

| ವಾದಿಗಳು | ಪ್ರತಿವಾದಿಗಳು |
| --- | --- |
| 1)ಕೊಟ್ರಪ್ಪ ತಂದೆ ಲೇಟ್ ದಾಸರ ಕೃಷ್ಣಪ್ಪ<br>2)ವಿರುಪಾಕ್ಷಪ್ಪ ತಂದೆ ದಾಸರ ಕೃಷ್ಣಪ್ಪ<br>3)ದಾಸರ ಕೃಷ್ಣಪ್ಪ ತಂದೆ ಗೋವಿಂದಪ್ಪ<br>ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಕೊಟ್ಟೂರು |
| ಕೂಡ್ಲಿಗಿ ತಾಲೂಕು ರಾಂಪುರ ಗ್ರಾಮದ ಸನಂ 105/3. 105/3ಎ/1. 132/1ಸಿ. .ವಿಸ್ತೀರ್ಣ 3-00. 1-43. 0-36. ಎಕ್ರೆ ಜಮೀನುಗಳನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ರಾಂಪುರ ಗ್ರಾಮದ ಸನಂ 105/3. 105/3ಎ/1. 132/1ಸಿ. .ವಿಸ್ತೀರ್ಣ 3-00. 1-43. 0-36. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ಕೊಟ್ಟೂರು ಪಟ್ಟಣದ ಕೊಟ್ರಪ್ಪ ತಂದೆ ಲೇಟ್ ದಾಸರ ಕೃಷ್ಣಪ್ಪ ಇವರು ದಿನಾಂಕ 30-04-2011 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ರಾಂಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 02-11-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಅರ್ಜಿದಾರರಾದ ಕೊಟ್ರಪ್ಪ ತಂದೆ ಲೇಟ್ ದಾಸರ ಕೃಷ್ಣಪ್ಪ ಇವರು ದಿನಾಂಕ 10-11-2015 ರಂದು ಮರಣ ಹೊಂದಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 21/2015-16. ದಿನಾಂಕ 03-12-2015 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 26-07-2016 ರಿಂದ 23-08-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ನಿಧನ ಹೊಂದಿರುವ ಕಾರಣ ಅವರ ಮಗ ರಂಗನಾಥ ತಂದೆ ಲೇಟ್ ಕೊಟ್ರಪ್ಪ ಇವರು ಹಾಜರಾಗಿರುತ್ತಾರೆ. ಅರ್ಜಿದಾರರಾದ ಕೊಟ್ರಪ್ಪ ಇವರು ರಾಂಪುರ ಗ್ರಾಮದ ಸನಂ 105/3. 105/3ಎ/1. 132/1ಸಿ. .ವಿಸ್ತೀರ್ಣ 3-00. 1-43. 0-36. ಎಕ್ರೆ ಜಮೀನುಗಳನ್ನು ದಿನಾಂಕ 30-04-2011 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿದ್ದು ಅವರು ದಿನಾಂಕ 10-11-2015 ರಂದು ಮರಣ ಹೊಂದಿರುವುದಾಗಿ ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಮೃತರಾಗಿರುವುದರಿಂದ ಹಕ್ಕು ಬದಲಾವಣೆಯ ಅರ್ಜಿಯನ್ನು ಕಂದಾಯ ಪರಿವೀಕ್ಷಕರು ತಿರಸ್ಕರಿಸಿರುವ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

ಪು.ತಿ.ನೋ:-2

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ರಾಂಪುರ ಗ್ರಾಮದ ಸನಂ 105/3. 105/3ಎ/1. 132/1ಸಿ. .ವಿಸ್ತೀರ್ಣ 3-00. 1-43. 0-36. ಎಕ್ರೆ ಜಮೀನುಗಳನ್ನು ಅರ್ಜಿದಾರರು ಮೃತರಾಗಿರುವ ಕಾರಣ ಹಕ್ಕು ಬದಲಾವಣೆಯ ಅರ್ಜಿಯನ್ನು ತಿರಸ್ಕರಿಸುತ್ತಾ ಪಹಣಿಯನ್ನು ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 23-08-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಕೊಟ್ರಪ್ಪ ತಂದೆ ಲೇಟ್ ದಾಸರ ಕೃಷ್ಣಪ್ಪ. ವಿರುಪಾಕ್ಷಪ್ಪ ತಂದೆ ದಾಸರ ಕೃಷ್ಣಪ್ಪ. ದಾಸರ ಕೃಷ್ಣಪ್ಪ ತಂದೆ ಗೋವಿಂದಪ್ಪ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಕೊಟ್ಟೂರು ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.